-19-

ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ          ದಿನಾಂಕ : DATE : 23/1/21

# ಮತ್ತೆ 6 ಸಚಿವರ ಖಾತೆ ಬದಲು

## ಒತ್ತಡಕ್ಕೆ ಮಣಿದು ಒಂದೇ ದಿನದಲ್ಲಿ ಮರುಹಂಚಿಕೆ
## ಖಾತೆ ಬದಲಾದ 6 ಜನರಲ್ಲಿ 4 ಮಂದಿ ವಲಸಿಗರು
## ಮುಂದೆ ಬಿಎಸ್‌ವೈಗೆ ಜಿಲ್ಲಾ ಉಸ್ತುವಾರಿ ಸವಾಲು

**ಕನ್ನಡಪ್ರಭ ವಾರ್ತೆ** ಬೆಂಗಳೂರು

ಈಗ ನೀಡಿರುವ ಖಾತೆಗಳು ಸರಿಹೋಗದಿದ್ದರೆ ಕೆಲವು ದಿನಗಳ ಬಳಿಕ ಬದಲಾಯಿಸೋಣ ಎಂಬ ಮಾತನ್ನು ಹೇಳಿದ್ದ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರು ಸಚಿವರ ಅಸಮಾಧಾನಕ್ಕೆ ಮಣಿದು ಒಂದೇ ದಿನದಲ್ಲಿ ಖಾತೆಗಳ ಮರುಹಂಚಿಕೆ ಮಾಡಿದ್ದಾರೆ.

ಗುರುವಾರ ರಾತ್ರಿಯಿಡೀ ನಡೆದ ಸಂಧಾನ ಮಾತುಕತೆ ಯಶಸ್ವಿ ಆಗದೆ ಇದ್ದುದರಿಂದ ಅಂತಿಮವಾಗಿ ಒಟ್ಟು ಆರು ಮಂದಿ ಸಚಿವರ ಖಾತೆಗಳಲ್ಲಿ ಬದಲಾವಣೆ ಮಾಡಿ ಶುಕ್ರವಾರ ರಾಜ್ಯಪಾಲರಿಗೆ ಶಿಫಾರಸು ಮಾಡಿದರು. ಅದರ ಬೆನ್ನಲ್ಲೇ ಅಧಿಸೂಚನೆ ಹೊರಬಿದ್ದಿದೆ. ಈ ಆರು ಮಂದಿ ಪೈಕಿ ನಾಲ್ವರು ವಲಸಿಗ ಸಚಿವರಿದ್ದಾರೆ.

ಹಾಗಂತ ಖಾತೆ ಹಂಚಿಕೆ ಸಂಬಂಧ ಸಚಿವರಲ್ಲಿ ಉದ್ಭವಿಸಿದ್ದ ಅಸಮಾಧಾನ ಪೂರ್ಣ ಪ್ರಮಾಣದಲ್ಲಿ ಶಮನಗೊಂಡಿದೆ ಎಂಬಂತೆ ಅಲ್ಲದಿದ್ದರೂ ಒಂದು ಹಂತಕ್ಕೆ ತಣ್ಣಗಾಗಿದೆ. ಮುಂದೆ ಜಿಲ್ಲಾ ಉಸ್ತುವಾರಿ ಹಂಚಿಕೆ ವೇಳೆ ಮತ್ತೆ ಅಪಸ್ವರ ಹೊರಬೀಳುವ ಸಾಧ್ಯತೆ ಇಲ್ಲದಿಲ್ಲ.

ಪ್ರಮುಖವಾಗಿ ತಮಗೆ ನೀಡಿದ್ದ ಅಬಕಾರಿ ಖಾತೆ ಬೇಡವೇ ಬೇಡ ಎಂಬ ಪಟ್ಟು ಹಿಡಿದಿದ್ದ ಎಂ.ಟಿ.ಬಿ. ನಾಗರಾಜ್ ಅವರಿಗೆ ಪೌರಾಡಳಿತ ಮತ್ತು ಸಕ್ಕರೆ ಖಾತೆಗಳನ್ನು ನೀಡಲಾಗಿದೆ. ಅಬಕಾರಿ ಖಾತೆಯನ್ನು ಕೆ. ಗೋಪಾಲಯ್ಯ ಅವರಿಗೆ ಕೊಡಲಾಗಿದೆ.

ಖಾತೆ ಬದಲಾವಣೆ ಹಿನ್ನೆಲೆಯಲ್ಲಿ ರಾಜೀನಾಮೆ ನೀಡುವ ಮನಸ್ಥಿತಿಗೆ ತಲುಪಿದ್ದ ಹಿರಿಯ ಸಚಿವ ಜೆ.ಸಿ. ಮಾಧುಸ್ವಾಮಿ ಅವರಿಗೆ ವೈದ್ಯಕೀಯ. ಶಿಕ್ಷಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಖಾತೆಗಳನ್ನು ನೀಡಲಾಗಿತ್ತು. ಇದೀಗ ಕನ್ನಡ ಮತ್ತು ಸಂಸ್ಕೃತಿ ವಾಪಸ್ ಪಡೆದು ವಕ್ಫ್ ಮತ್ತು ಹಜ್ ಖಾತೆ ನೀಡಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಖಾತೆಯನ್ನು ಈಗಿರುವ ಅರಣ್ಯ ಖಾತೆಯೊಂದಿಗೆ ಅರವಿಂದ್ ಲಿಂಬಾವಳಿ ಅವರಿಗೆ ಹಂಚಿಕೆ ಮಾಡಲಾಗಿದೆ. ↘ 15



## ಯಾರ್‍ಯಾರ ಖಾತೆ ಬದಲಾವಣೆ?

1 **ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ**
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಸಂಪುಟ ವ್ಯವಹಾರಗಳು, ಹಣಕಾಸು, ಬೆಂಗಳೂರು ಅಭಿವೃದ್ಧಿ, ಇಂಧನ, ಗುಪ್ತಚರ, ಮೂಲಸೌಕರ್ಯ ಅಭಿವೃದ್ಧಿ

2 **ಜೆ.ಸಿ. ಮಾಧುಸ್ವಾಮಿ**
ವೈದ್ಯಕೀಯ ಶಿಕ್ಷಣ, ಹಜ್ ಮತ್ತು ವಕ್ಫ್

3 **ಅರವಿಂದ ಲಿಂಬಾವಳಿ**
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ

4 **ಎಂ.ಟಿ.ಬಿ. ನಾಗರಾಜ್**
ಪೌರಾಡಳಿತ, ಸಕ್ಕರೆ

5 **ಕೆ. ಗೋಪಾಲಯ್ಯ**
ಅಬಕಾರಿ

6 **ಆರ್.ಶಂಕರ್**
ತೋಟಗಾರಿಕೆ, ರೇಷ್ಮೆ

7 **ಕೆ.ಸಿ.ನಾರಾಯಣಗೌಡ**
ಯುವ ಸಬಲೀಕರಣ ಮತ್ತು ಕ್ರೀಡೆಗಳು, ಯೋಜನೆ, ಕಾರ್ಯಕ್ರಮ ಅನುಷ್ಠಾನ ಮತ್ತು ಸಾಂಖ್ಯಿಕ

# ಮತ್ತೆ 6 ಸಚಿವರ ಖಾತೆ ಬದಲು

↙ ಮೊದಲ ಪುಟದಿಂದ
ಶಂಕರ್ ಅವರಿಗೆ ಪೌರಾಡಳಿತ ಪೌರಾಡಳಿತ ಮತ್ತು ರೇಷ್ಮೆ ಖಾತೆ ನೀಡಿದ್ದ
ಖಾತೆ ನೀಡಲಾಗಿದೆ.
ಒಂದನ್ನು ವಾಪಸ್ ಪಡೆದು ತೋಟಗಾರಿಕೆ
ನಾರಾಯಣಗೌಡ ಅವರಿಗೆ ಯುವ ಸಬಲೀಕರಣ ಮತ್ತು ಕ್ರೀಡಾ
ಇಲಾಖೆ ಜೊತೆಗೆ ಯೋಜನೆ, ಕಾರ್ಯಕ್ರಮ ಅನುಷ್ಠಾನ ಮತ್ತು
ಸಾಂಖ್ಯಿಕ ಖಾತೆಯ ಜವಾಬ್ದಾರಿಯನ್ನೂ ವಹಿಸಲಾಗಿದೆ.

ಅಂತಿಮವಾಗಿ ಮರುಹಂಚಿಕೆ ಬಳಿಕ ಮುಖ್ಯಮಂತ್ರಿ
ಯಡಿಯೂರಪ್ಪ ಅವರ ಬಳಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ,
ಸಂಪುಟ ವ್ಯವಹಾರಗಳು, ಹಣಕಾಸು, ಬೆಂಗಳೂರು ಅಭಿವೃದ್ಧಿ,
ಇಂಧನ, ಗುಪ್ತಚರ, ಮೂಲಸೌಕರ್ಯ ಅಭಿವೃದ್ಧಿ ಖಾತೆಗಳು
ಉಳಿದುಕೊಂಡಿವೆ.

**ಶಂಕರ್‌ಗೆ ಹಾವೇರಿ ಉಸ್ತುವಾರಿ?:** ತಮಗೆ ನೀಡಿದ್ದ ಪೌರಾಡಳಿತ
ಮತ್ತು ರೇಷ್ಮೆ ಖಾತೆ ಪೈಕಿ ಪೌರಾಡಳಿತ ವಾಪಸ್ ಪಡೆದು ತೋಟಗಾರಿಕೆ
ಖಾತೆ ನೀಡಿದ್ದಕ್ಕೆ ಅಸಮಾಧಾನಗೊಂಡಿರುವ ಸಚಿವ ಶಂಕರ್ ಅವರು
ತಮಗೆ ಹಾವೇರಿ ಜಿಲ್ಲೆಯ ಉಸ್ತುವಾರಿ ನೀಡಬೇಕು ಎಂಬ
ಬೇಡಿಕೆಯನ್ನು ಇಟ್ಟಿದ್ದಾರೆ. ಇದಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ
ಅವರು ಪರಿಶೀಲಿಸುವ ಭರವಸೆ ನೀಡಿದ್ದಾರೆ ಎಂದು ಮೂಲಗಳು
ತಿಳಿಸಿವೆ.

ಸದ್ಯಕ್ಕೆ ಹಾವೇರಿ ಜಿಲ್ಲಾ ಉಸ್ತುವಾರಿಯನ್ನು ಗೃಹ ಸಚಿವ ಬಸವರಾಜ
ಬೊಮ್ಮಾಯಿ ಅವರು ಹೊಂದಿದ್ದಾರೆ. ಬೊಮ್ಮಾಯಿ ಅವರು ಹಾವೇರಿ
ಜೊತೆಗೆ ಉಡುಪಿ ಜಿಲ್ಲಾ ಉಸ್ತುವಾರಿಯೂ ಆಗಿದ್ದಾರೆ. ಆದರೂ
ತವರು ಜಿಲ್ಲೆಯನ್ನು ಬೊಮ್ಮಾಯಿ ಅವರು ಬಿಟ್ಟು ಕೊಡುತ್ತಾರೆಯೇ
ಎಂಬುದು ಕುತೂಹಲಕರವಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಬೊಮ್ಮಾಯಿ, ಜಿಲ್ಲೆಗಳ ಉಸ್ತುವಾರಿ
ಹಂಚಿಕೆ ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟ ವಿಚಾರ. ಅವರು
ಯಾವ ಜಿಲ್ಲೆಯ ಉಸ್ತುವಾರಿ ಕೊಡುತ್ತಾರೆಯೋ ಅದನ್ನು ನಾವು
ಒಪ್ಪಿಕೊಳ್ಳಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

**ಬೊಮ್ಮಾಯಿ, ಅಶೋಕ್ ಸಂಧಾನ:** ಖಾತೆ ಹಂಚಿಗೆ ಸಂಬಂಧಿಸಿದಂತೆ
ಅತೃಪ್ತ ಸಚಿವರನ್ನು ಸಮಾಧಾನಪಡಿಸುವಲ್ಲಿ ಗೃಹ ಸಚಿವ ಬಸವರಾಜ
ಬೊಮ್ಮಾಯಿ ಮತ್ತು ಕಂದಾಯ ಸಚಿವ ಆರ್.ಅಶೋಕ್ ಮಹತ್ತರ
ಪಾತ್ರ ವಹಿಸಿದ್ದಾರೆ. ಕಳೆದ ಎರಡು ದಿನಗಳಿಂದ ಅತೃಪ್ತ ಸಚಿವರೊಂದಿಗೆ
ಸತತವಾಗಿ ಮಾತುಕತೆ ನಡೆಸುವ ಮೂಲಕ ಅವರ ಬೇಡಿಕೆಗಳನ್ನು
ಸೂಕ್ಷ್ಮವಾಗಿ ಈಡೇರಿಸುವಲ್ಲಿ ಉಭಯ ಸಚಿವರೂ ಬಹುತೇಕ
ಯಶಸ್ವಿಯಾಗಿದ್ದಾರೆ. ಅತೃಪ್ತ ಸಚಿವರು ಹಾಗೂ ಮುಖ್ಯಮಂತ್ರಿ
ಯಡಿಯೂರಪ್ಪ ನಡುವೆ ಮಧ್ಯಸ್ಥಿಕೆ ವಹಿಸಿದ ಉಭಯ ಸಚಿವರು
ಕೊನೆಗೂ ಉದ್ಭವಿಸಿದ್ದ ಅಸಮಾಧಾನವನ್ನು ಬಹುತೇಕ
ನಿವಾರಿಸಿದ್ದಾರೆ.